17

ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಗೃಹ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ    ದಿನಾಂಕ : DATE : 6/2/2020

# ಶಾಸಕರಿಗೆ ಜೈಕಾರ ಹಾಕಿದ ಇನ್‌ಸ್ಪೆಕ್ಟರ್‌ಗೆ ನೋಟಿಸ್

ವಿಜಯವಾಣಿ ಚಿತ್ರ



ಶಾಸಕ ಬೈರತಿ ಬಸವರಾಜ್ ಹುಟ್ಟುಹಬ್ಬದಲ್ಲಿ ಬೆಳ್ಳಿಗದೆ ನೀಡಿ ಜೈಕಾರ ಹಾಕುತ್ತಿರುವ ಇನ್‌ಸ್ಪೆಕ್ಟರ್ ಅಂಬರೀಷ್ (ಜಾಲತಾಣದಲ್ಲಿ ವೈರಲ್ ಆಗಿರುವ ಚಿತ್ರ).

**ಬೆಂಗಳೂರು:** ಶಾಸಕ ಬೈರತಿ ಬಸವರಾಜ್ ಹುಟ್ಟುಹಬ್ಬಕ್ಕೆ 53 ಕೆಜಿ ಕೇಕ್ ಕತ್ತರಿಸಿ ಕೈಗೆ ಬೆಳ್ಳಿಗದೆ ಕೊಟ್ಟು ವೇದಿಕೆ ಮೇಲೆ ಜೈಕಾರ ಕೂಗಿದ ಕೃಷ್ಣರಾಜಪುರ ಪೊಲೀಸ್ ಇನ್‌ಸ್ಪೆಕ್ಟರ್ ಅಂಬರೀಷ್‌ಗೆ ಇಲಾಖೆ ನೋಟಿಸ್ ಜಾರಿ ಮಾಡಿದೆ.

» **ಶಾಸಕ ಬೈರತಿ ಬಸವರಾಜ್ ಹುಟ್ಟುಹಬ್ಬದಲ್ಲಿ ಜೋಶ್**

ಬೈರತಿ ಬಸವರಾಜ್ ಮಂಗಳವಾರ (ಫೆ.4) ಕ್ಷೇತ್ರದ ಅಭಿಮಾನಿಗಳ ಸಮ್ಮುಖದಲ್ಲಿ ಹುಟ್ಟುಹಬ್ಬ ಆಚರಿಸಿಕೊಂಡರು. ಅಂಬರೀಷ್ ಸೇರಿ ಕೆಲ ಪೊಲೀಸ್ ಅಧಿಕಾರಿಗಳು ಶುಭ ಕೋರಲು ತೆರಳಿದ್ದರು. 53ನೇ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿದ್ದ ಶಾಸಕರಿಗಾಗಿ 53 ಕೆಜಿ ಕೇಕ್ ಮಾಡಿಸಿಕೊಂಡು ಬಂದಿದ್ದ ಅಂಬರೀಷ್, ಆದನ್ನು ಶಾಸಕರಿಂದ ಕತ್ತರಿಸಿ ಗದೆ ನೀಡಿದರು. ವೇದಿಕೆ ಮೇಲೆಯೇ 'ಬೈರತಿ ಬಸವರಾಜ್ ಅಣ್ಣನಿಗೆ ಜೈ' ಎಂದು ಜೈಕಾರ ಕೂಗಿದರು. ಈ ಎಲ್ಲವನ್ನು ವಿಡಿಯೋ ಮಾಡಿಕೊಂಡಿದ್ದ ಜನರು ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದು, ಪೊಲೀಸ್ ಅಧಿಕಾರಿಯ ವರ್ತನೆ ಟೀಕೆಗೊಳಗಾಗಿದೆ. ಇದನ್ನು ಗಂಭೀರವಾಗಿ ಪರಿಗಣಿಸಿರುವ ಡಿಸಿಪಿ ಎಂ.ಎನ್. ಅನುಚೇತ್, ಕಾರಣ ಕೇಳಿ ನೋಟಿಸ್ ಜಾರಿ ಮಾಡಿದ್ದಾರೆ.